

# ಮಾತಿನ ಹಂಗು ಮೀರಿದ ನಾಯಕ!

ಮಾತು ಆಯುಧದ ರೂಪದಲ್ಲಿ ಬಳಕೆಯಾಗುತ್ತಿರುವ ಸಂದರ್ಭದಲ್ಲಿ, ಮಾತಿನ ಹಂಗಿಲ್ಲದ ರಚನಾತ್ಮಕ ಸಾಧ್ಯತೆಗಳನ್ನು ಕಟ್ಟಿಕೊಡುವ ಪ್ರಯತ್ನವನ್ನು ಹಿರಿಯ ನಿರ್ದೇಶಕ ಬರಗೂರು ರಾಮಚಂದ್ರಪ್ಪನವರು ಮಾಡಿದ್ದಾರೆ. ಅವರ ಹೊಸ ಚಿತ್ರ 'ಮೂಕನಾಯಕ' ಈಗ ತೆರೆಗೆ ಸಿದ್ಧವಾಗಿದೆ.

ತಮ್ಮ ಪ್ರತಿ ಚಿತ್ರದಲ್ಲೂ ಹೊಸತೊಂದು ಪ್ರಯೋಗಕ್ಕೆ ಹಂಬಲಿಸುವ ಮನಸು ಬರಗೂರರದು. ಎಲ್ಲ ಕಲಾಮಾಧ್ಯಮಗಳ ಕೇಂದ್ರದಲ್ಲಿ ಸಾಮಾಜಿಕ ಕಾಳಜಿ ಇರಬೇಕೆನ್ನುವ ಹಂಬಲದಿಂದ, ತಮ್ಮ ಚಿತ್ರಗಳ ಮೂಲಕ ವರ್ತಮಾನದ ಬಿಕ್ಕಟ್ಟುಗಳನ್ನು ಅರ್ಥೈಸುವ ಪ್ರಯತ್ನವನ್ನು ಅವರು ನಿರಂತರವಾಗಿ ಮಾಡುತ್ತಿದ್ದಾರೆ. ಈ ಪ್ರಯತ್ನದ ಮುಂದುವರೆದ ಭಾಗದಂತಿರುವ 'ಮೂಕನಾಯಕ', ಮಾತು ಬಾರದ ಕಲಾವಿದನೊಬ್ಬನ ಬದುಕಿನ ಕಥನ.

ತನ್ನ ಕಲಾಕೃತಿಗಳನ್ನೇ ಸಂವಹನದ ದಾರಿಯನ್ನಾಗಿಸಿಕೊಳ್ಳುವ ಕಥಾನಾಯಕ, ಮಾತಿನ ಹಂಗನ್ನು ರೇಖೆ–ಬಣ್ಣಗಳ ಮೂಲಕ ಮೀರಲು ಪ್ರಯತ್ನಿಸುತ್ತಾನೆ. ದಲಿತರು ಹಾಗೂ ಬಡವರ ಅನುದಿನದ ಸಂಕಷ್ಟಗಳು ಅವನ ಕಲಾಕೃತಿಗಳು! ಮಾರುಕಟ್ಟೆಯ ಬೆಂಬಲವಿಲ್ಲದ ಕಲಾವಿದನ ಸೃಜನಶೀಲತೆಯನ್ನು ಬೆಂಬಲಿಸುವ ಅಕ್ಕ ಚಿತ್ರದಲ್ಲಿದ್ದಾಳೆ. ಮಾತು–ಮೌನದ ಹಲವು ಮಗ್ಗುಲುಗಳನ್ನು ಕಾಣಿಸುತ್ತಲೇ ಪ್ರೇಮಕಥನವೊಂದು ಕೂಡ ಚಿತ್ರದ ಭಾಗವಾಗಿದೆ.

ಸುರೇಶ್ ಅರಸು ಸಂಕಲನ ಹಾಗೂ ನಾಗರಾಜ ಆದವಾನಿ ಛಾಯಾಗ್ರಹಣ ಚಿತ್ರಕ್ಕಿದೆ. ಕಿರುತೆರೆಯ 'ಬಿಗ್ ಬಾಸ್' ಖ್ಯಾತಿಯ ರೇಖಾ, ಶೀತಲ್ ಶೆಟ್ಟಿ ಹಾಗೂ ಕುಮಾರ್ ಗೋವಿಂದು ತಾರಾಗಣದಲ್ಲಿರುವ ಪ್ರಮುಖರು. ಖ್ಯಾತ ಗಾಯಕಿ ಶಮಿತಾ ಮಲ್ನಾಡ್ ಅವರ ಸಂಗೀತ ಸಂಯೋಜನೆ ಚಿತ್ರದ ಮತ್ತೊಂದು ವಿಶೇಷ.

# ಕಾವ್ಯ ಕ್ಷಣ..

'ನಮ್ ದುನಿಯಾ', 'ಇಷ್ಟಕಾಮ್ಯ', 'ಸ್ಮೈಲ್ ಪ್ಲೀಸ್', 'ಸಿಲಿಕಾನ್ ಸಿಟಿ' ಚಿತ್ರಗಳ ಮೂಲಕ ಕನ್ನಡ ಪ್ರೇಕ್ಷಕರಿಗೆ ಪರಿಚಿತರಾದ ಕಾವ್ಯಾ ಶೆಟ್ಟಿ ನಟನೆಯ ಹೊಸ ಚಿತ್ರ ಈಗ ಚಿತ್ರಮಂದಿರಗಳಲ್ಲಿದೆ. ಮಧುಸೂದನ್ ನಿರ್ದೇಶನದ '3 ಗಂಟೆ 30 ದಿನ 30 ಸೆಕೆಂಡ್' ಕಾವ್ಯಾ ಶೆಟ್ಟಿ ಅಭಿನಯದ ಚಿತ್ರ. ಶೀರ್ಷಿಕೆಯಿಂದಲೇ ಚಿತ್ರರಸಿಕರ ಗಮನಸೆಳೆದಿರುವ ಈ ಸಿನಿಮಾದಲ್ಲಿ ನಾಯಕಿಯ ಪಾತ್ರಕ್ಕೆ ಹೆಚ್ಚು ಸ್ಕೋಪ್ ಇದೆಯಂತೆ. ಸಿನಿಮಾದ ಹಾಡುಗಳ ಬಗ್ಗೆ ಒಳ್ಳೆಯ ಅಭಿಪ್ರಾಯ ಇರುವುದರಿಂದ ಸಿನಿಮಾದ ಬಗ್ಗೆ ಕೂಡ ಗಾಂಧಿನಗರದಲ್ಲಿ ನಿರೀಕ್ಷೆಗಳಿವೆ.

ಚಿತ್ರದಲ್ಲಿ ಕಾವ್ಯಾ ಅವರದು ಪತ್ರಕರ್ತೆಯ ಪಾತ್ರ. ವ್ಯವಸ್ಥೆಯ ಹುಳುಕುಗಳನ್ನು ಪ್ರಶ್ನಿಸುವ ದಿಟ್ಟತನ ಪ್ರದರ್ಶಿಸುವ ನಾಯಕಿ, ಅನಿರೀಕ್ಷಿತವಾಗಿ ವಕೀಲನೊಬ್ಬನ ತಾಳಕ್ಕೆ ತಕ್ಕಂತೆ ಕುಣಿಯಬೇಕಾದ ಸಂದರ್ಭಕ್ಕೆ ಸಿಲುಕುವುದು ಚಿತ್ರದ ಕಥೆ. ಒಂದು ತಿಂಗಳ ಅವಧಿಯಲ್ಲಿ ನಡೆಯುವ ಈ ಕಣ್ಣಾಮುಚ್ಚಾಲೆಗೆ ಮೂವತ್ತು ಸೆಕೆಂಡ್‌ಗಳಲ್ಲಿ ಪರಿಹಾರ ಸಿಗುತ್ತದಂತೆ.

ಕಾವ್ಯಾ ಮಂಗಳೂರು ಮೂಲದ ತರುಣಿ. ಮಾಡೆಲಿಂಗ್ ಮತ್ತು ಕಿರುತೆರೆಯಲ್ಲಿ ಕೆಲಸ ಮಾಡಿರುವ ಅನುಭವ ಹೊಂದಿರುವ ಅವರು, ಈಗ ಬೆಳ್ಳಿತೆರೆಯಲ್ಲಿ ನೆಲೆ ಕಂಡುಕೊಳ್ಳಲು ಹಂಬಲಿಸುತ್ತಿದ್ದಾರೆ. ಚಿತ್ರರಂಗ ಪ್ರವೇಶಿಸಿ ನಾಲ್ಕು ವರ್ಷಗಳಾದರೂ ಪ್ರೇಕ್ಷಕರ ಮನಸ್ಸಿನಲ್ಲಿ ಛಾಪು ಮೂಡಿಸುವಂತಹ ಪಾತ್ರಗಳು ಅವರಿಗೆ ದೊರೆತದ್ದು ಕಡಿಮೆ. ಹಾಗಾಗಿ '3 ಗಂಟೆ 30 ದಿನ 30 ಸೆಕೆಂಡ್' (ಜ. 19ರಂದು ತೆರೆಗೆ) ಸಿನಿಮಾದ ಬಗ್ಗೆ ಅವರಿಗೆ ಸಾಕಷ್ಟು ನಿರೀಕ್ಷೆಗಳಿವೆ. ಪಾತ್ರಕ್ಕಿರುವ ಹಲವು ಆಯಾಮಗಳೂ ಅವರಿಗೆ ಖುಷಿ ಕೊಟ್ಟಿವೆ.

ಅರು ಗೌಡ ಚಿತ್ರದ ನಾಯಕ. ಶ್ರೀಧರ್ ಸಂಭ್ರಮ್ ಸಂಗೀತ, ಶ್ರೀನಿವಾಸ್ ರಾಮಯ್ಯ ಛಾಯಾಗ್ರಹಣ ಚಿತ್ರಕ್ಕಿದೆ.

■ ರಘು

